ಮಾರಿಕಾಂಬಾ ದೇವಸ್ಥಾನದೊಳಗೆ ತುಂಬಿತುಳುಕಿ ರಸ್ತೆಯಲ್ಲೆಲ್ಲ ಗಿಜಿಗಿಜಿ ಆವರಿಸಿಕೊಂಡ ಭಕ್ತಜಂಗುಳಿಯಲ್ಲಿ ಸಹನೆಯಿಂದ ದಾರಿಮಾಡಿಕೊಂಡು ಪಾರಾದ ಬಸ್ಸು ಓಣಿಯಂತಿದ್ದ ರಸ್ತೆಯ ಏರು ಹತ್ತಿ ತಿರುಗಿಕೊಳ್ಳುತ್ತಿದ್ದಂತೆ ಆಗಷ್ಟೆ ಕವುಚಿಕೊಂಡು ತೆವಳತೊಡಗಿದ ಮಗುವಿನಂತೇ ಆಗಿಬಿಟ್ಟಿತು. ದಾರಿಯ ಈ ಕಡೆಯುದ್ದಕೂ ರಾಶಿ ಹೊಡೆದ ಬೆಂಡೆ, ತೊಂಡೆ, ಬದನೆ ತರಾವರಿ ಕಾಯಿಪಲ್ಲೆಯವರಾದರೆ, ಆ ಕಡೆ ನುಗ್ಗಿ, ಹರಿವೆ, ಬಸಳೆ ಯಾವ್ಯಾವುದೊ ಸೊಪ್ಪಿನವರು, ಮೆಣಸಿನಕಾಯಿಯವರು, ವೀಳ್ಯದೆಲೆಯವರು ಮಂಗಳವಾರ ಆಕಾಶದಿಂದ ಉದುರಿದಂತೆ ಪ್ರತ್ಯಕ್ಷರಾಗಿದ್ದರು. ಬಿಡಕಿಬಯಲಿನ ಕಾಯಂ ಮಾರುಕಟ್ಟೆಗೆ ಸಂತೆಯ ನೆರೆ ಬಂದು ಸುತ್ತಮುತ್ತ ರಸ್ತೆಗೆಲ್ಲ ಹರಡಿ ನುಂಗಿಬಿಟ್ಟಿತ್ತು. ಎರಡು ಬಸ್ಸಿಗಾಗುವಷ್ಟು ಜನ ತುರುಕಿಕೊಂಡ ಬಸ್ಸಲ್ಲಿ ಊರಲ್ಲೆ ಕಿಡಕಿಪಕ್ಕ ಸೀಟು ಸಿಕ್ಕಿದ್ದ ಮುಕುಂದರಾಯರು ಗಾಜು ಸರಿಸಿ ತಲೆ ಹೊರಹಾಕಿ ನೋಡಿದರು. ಇವರ ಬಸ್ಸಿನ ಮುಂದೆ ಎರಡು ಟೆಂಪೊ, ಬೆಂಗಳೂರಿನ ಸೆಮಿಲಕ್ಷುರಿ, ಹೊನ್ನಾವರ–ಹುಬ್ಬಳ್ಳಿ, ಸಾಗರ–ಶಿರಸಿ, ಜಡೆ–ಶಿರಸಿ ಎಲ್ಲ ದೊಡ್ಡಿಗೆ ಹೊರಟ ಕುರಿಗಳಂತೆ ಸಾಲು ಹಚ್ಚಿಕೊಂಡು ಏದುಸಿರು ಬಿಡುತ್ತಿದ್ದವು. ಬಲಕ್ಕೆ ತಿರುಗಿದ ರಸ್ತೆಯಲ್ಲಿ ಅಂಗಡಿಸಾಲಿನವರು ತೂಗುಹಾಕಿದ ಬಾವಿಹಗ್ಗ, ಕಣ್ಣಿ, ಕಲ್ಲಿ, ಹುರಿಗಳು, ಸುಗಂಧರಾಜ, ಮಲ್ಲಿಗೆಮಾಲೆ, ಪ್ಲಾಸ್ಟಿಕ್ ಸಾಮಾನುಗಳು ಕೈಚಾಚಿದರೆ ಸಿಗುವ ಹತ್ತಿರದಲ್ಲಿ ಬಸ್ಸು ನುಸುಳುತ್ತಿತ್ತು. ಕಮ್ಮಾರ ಈರಪ್ಪನ ಕತ್ತಿ ಕುಡುಗೋಲು, ಹಾವೇರಿ ಸಣ್ಣಪ್ಪನ ಕಂಬಳಿ ವ್ಯಾಪಾರ ನಡೆದಿತ್ತು. ಚಡ್ಡಿ ಬನಿಯನ್ನಿನ ಚಹಾದ ಹುಡುಗ ಸಿಕ್ಕಷ್ಟೆ ಪಡಕಿನಲ್ಲಿ ಕಾಲಿಡುತ್ತ ಅಂಟಂಟಾದ ಚಹದ ಗ್ಲಾಸು ಸರಬರಾಜು ಮಾಡುತ್ತಿದ್ದ. ಬ್ಯಾಡಗಿಮೆಣಸಿನವ ಚೀಲವನ್ನು ಅನಾಮತ್ತಾಗಿ ಸುರುಗಿ ಕೊಡವಿ ತಕ್ಕಡಿಗೆ ಮೊಗೆಮೊಗೆದು ತುಂಬತೊಡಗಿದ್ದಕ್ಕೆ ಎದ್ದ ಘಾಟು ಹರಡಿ ಬಸ್ಸೊಳಗಿದ್ದವರೆಲ್ಲಾ ಕೆಮ್ಮತೊಡಗಿದರು. 'ಎಂತಾ ಈ ನಮುನಿ ಜನ ಪ್ಯಾಟೆ ತಿರಗತಾರೇನಪ? ಏನು ಕೆಲಸ ಇರತದೆ ಇಲ್ಲಿ?' ಒಂದೇಸಮ ಕೆಮ್ಮುತ್ತ ರಾಮಸೇರೇಗಾರ ಅಲವತ್ತುಕೊಂಡದ್ದಕ್ಕೆ ಶೀನಪ್ಪ ಶೆಟ್ಟಿ, 'ಇದೊಳ್ಳೇ ಕತೆ. ನೀ ಬಂದದ್ಯಾಕೆ ಹೇಳು ನೋಡ್ವ!' ಅಂದ. ಇಬ್ಬರೂ ಒಂತರಾ ನಕ್ಕರು. ಹಾಗೆ ನೋಡಿದರೆ ಇವತ್ತೇ ಮಾಡಬೇಕು ಅನ್ನೋ ತಲೆಹೋಗೋ ಕೆಲಸ ತನಗೂ ಇಲ್ಲಿರಲಿಲ್ಲ ಅನಿಸಿತು ಮುಕುಂದರಾಯರಿಗೆ. ಆದರೆ ಅದೇನೋ ಮಂಗಳವಾರ ಪೇಟೆಗೆ ಬರುವುದು ಅನಿವಾರ್ಯ ಅನಿಸುವಂತ ಒತ್ತಡ ಮನಸಲ್ಲಿ ಮೂಡಿಬಿಡುತ್ತದೆ. ಈ ಗದ್ದಲ, ಬೆವರು ಬಸಿಯೊ ಬಿಸಿಲು, ಮಾರ್ಕೆಟ್ಟಿನ ವಾಸನೆ, ಚಹಾ, ಖಾನಾವಳಿ ಊಟ ಎಲ್ಲಾ ಆಗಾಗ ನಡೆಸುವ ಸಂಸ್ಕಾರದಂತೆ ಎದೆಯಲ್ಲಿ ಸಣ್ಣ ಸಂಭ್ರಮದಲ್ಲಿ ಕೆರಳುತ್ತಿರುತ್ತವೆ. 'ಇವತ್ತು ಪೇಟೆಗೆ ಹೋಗದಿದ್ದರಾಗದ? ಹಿತ್ಲಲ್ಲಿ ಹಲಸಿನಕಾಯಿ ನಿಮ್ ಕೈಗೇ ಸಿಕ್ಕತದೆ; ಹಪ್ಪಳಕ್ಕೆ ಎರಡು ಕೆಡವಿಕೊಡಿ' ಬೆಳಗ್ಗೆ ಹೆಂಡತಿ ಅಂದದ್ದಕ್ಕೆ, 'ಸಾವಕ್ಕನಿಗೆ ಹೇಳಿದರೆ ಕೆಡವಿ ಸೊಳೆ ಬಿಡಿಸಿಯೂ ಕೊಡತಿದ್ಲು...' ಅಂದದ್ದೆ ತಡ, 'ನಿಮಗೆಲ್ಲ ಬೆಳಗಾದರೆ ನೆನಪಾಗಾದೇ ಸಾವಕ್ಕ!... ಹೊರಡಿ, ಬಸ್ಸು ಬರತದೆ' ಮುನಿಸಿನಲ್ಲಿ ಕೈಗೆ ಬ್ಯಾಗು ತುರುಕಿದ್ದಳು. ಇಂತಾ ಕೆಲಸವಿದ್ದಾಗೆಲ್ಲ ಅವಳನ್ನು ಈ ಹೆಂಗಸರೆ ಕರೆಯುತ್ತಿದ್ದದಕ್ಕಲ್ಲವೆ ತನಗೂ ನೆನಪಾಗಿದ್ದು? ನಾವು ಹೇಳಿದರೆ ಸುಮ್ಮನೆ ಸಿಟ್ಟು ಮಾಡಕಳೋದು. ಇವರಿಗೆಲ್ಲಾ ಹೀಗನಿಸ್ತಿರಬೇಕಾದರೆ ತಾವು ಗಂಡಸ್ರೆಲ್ಲಾ ಅವಳ ಬಗ್ಗೆ ಜಾಸ್ತಿ ಕಾಳಜಿ ಅಥವ ಅದಕ್ಕೂ ಮೀರಿದ್ದೇನಾದರೂ ನಮಗರಿವಿಲ್ಲದೆ ತೋರಿಸ್ತಾ ಇದ್ದೇವಾ ಅನ್ನುವ ಜಿಜ್ಞಾಸೆ ಅಚಾನಕ್ಕಾಗಿ ಮನದಲ್ಲಿ ಸುಳಿದು, ಥೊ... ತನಗಂತೂ ಹಾಗಿಲ್ಲ ಅಂದುಕೊಂಡವರಿಗೆ ಅಲ್ಲಾ, ಕಂಡಕಂಡವರ ಬಾಯಲ್ಲಿ ಮನಸಲ್ಲಿ ಹೀಗೆ ನುಗ್ಗಾಗೋದಕಿಂತ ಸುಮ್ಮನೆ ಸಾವಕ್ಕ ಇಲ್ಲಷ್ಟು ತರಕಾರಿ ಮಾರಿಕೊಂಡಿದ್ರು ಜೀವನ ಸಾಗುತ್ತಿತ್ತು ಅನಿಸಿತು. ತಾನೇ ಅವಳಿಗೆ ವಿವರಿಸಿ ಅಲ್ಪ ಸ್ವಲ್ಪ ಸಹಾಯ ಬೇಕಾದ್ರು ಮಾಡಬಹುದು